ಅಧ್ಯಕ್ಷರು : ಆಯಿತು, ಇನ್ನು ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರ ನಡೆಯುತ್ತಿದೆ, ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಮೂಲಕ ರಾಜೀನಾಮೆಯನ್ನು ಕೇಳಿದ್ದೆ. ಇನ್ನು ಕೇಳುವುದಕ್ಕೆ ಹೋಗುವುದಿಲ್ಲ. ನಾನು ಕೇಳಿದ್ದನ್ನು ಹಿಂತೆಗೆದುಕೊಂಡಿದ್ದೇನೆ. ಮಾನ್ಯ ಮಂತ್ರಿಯವರಿಗೆ ಹುಷಾರಿಲ್ಲ, ನನ್ನ ಮೇಲೆ ತಪ್ಪು ತಿಳಿದುಕೊಂಡು, ನೀವು ಖಾಯಿಲೆ ಗೀಯಲೆ ಬಿದ್ದುಬಿಡುತ್ತೀರಿ ಎಂದು ನಾನು ಕೇಳಿರುವಂತಹ ರಾಜೀನಾಮೆಯನ್ನು ಹಿಂದಕ್ಕೆ ಪಡೆದಿದ್ದೇನೆ.

ಡಾ.ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿರುವ ವಿಷಯದ ಬಗ್ಗೆ, ಇದು ನಿಜವಾಗಿ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಂತಹ ವಿಚಾರವಾಗಿದೆ. ಇದರ ಬಗ್ಗೆ ಗಮನಹರಿಸಿ, ತೀವ್ರಗತಿಯಾಗಿ ಪರಿಶೀಲನೆ ಮಾಡಿ, ಮತ್ತೆ ನಮ್ಮ ಉಸ್ತುವಾರಿ ಮಂತ್ರಿಗಳಾದ ಶ್ರೀ ಆರ್.ವಿ. ದೇಶಪಾಂಡೆಯವರು ಇದ್ದಾರೆ, ಅವರೂ ಕೇಳಿದ್ದಾರೆ, ಇದರ ಬಗ್ಗೆ ನಿಜವಾಗಿ ಚಿಂತನೆ ಮಾಡಿ, ಈ ವಿದ್ಯಾರ್ಥಿ ನಿಲಯವನ್ನು ಒದಗಿಸುತ್ತೇವೆಂದು ಈ ಸದನದ ಮೂಲಕ ಹೇಳಲಿಚ್ಚಿಸುತ್ತೇನೆ.

ವಿರಾಜ ಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣದಲ್ಲಿ ಹಣ ದುರ್ಬಳಕೆ

34(1148) ಶ್ರೀ ಬಸವರಾಜ್ ಹೆಚ್.ಡಿ. (ವಿರಾಜ ಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಳುಗೋಡು ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣಕ್ಕೆ ಸರ್ಕಾರದ (ಕೇಂದ್ರ) ಹಣ ಬಳಕೆ ಮಾಡಿಕೊಂಡಿದೆಯೇ :

ಆ) ಬಳಕೆ ಮಾಡಿದಲ್ಲಿ ಇದರಲ್ಲಿ ಬಹಳಷ್ಟು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ದುರ್ಬಳಕೆ ಸ್ವರೂಪಗಳೇನು, ಇದರಲ್ಲಿ ಅವ್ಯವಹಾರವಾಗಿರುವ ಹಣವೆಷ್ಟು;

ಇ) ಕಳಪೆ ಕಾಮಗಾರಿ ಕೈಗೊಂಡಿದ್ದಲ್ಲಿ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ;

ಈ) ಈ ವಸತಿ ಶಾಲೆ ಪ್ರಾರಂಭಕ್ಕೆ ಸರ್ಕಾರ ಯಾವ ಅಗತ್ಯ ಕ್ರಮವನ್ನು ಕೈಗೊಳ್ಳಲಿದೆ :

ಉ) ಜಿಲ್ಲೆಯಲ್ಲಿರುವ ವಸತಿ (ಆಶ್ರಮ) ಶಾಲೆಗಳುಎಷ್ಟು ? ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು ?

ಶ್ರೀ ಬಸವರಾಜ್ ಹೆಚ್.ಡಿ. (ಸಮಾಜ ಕಲ್ಯಾಣ ಸಚಿವರು):

ಅ) ಹೌದು,

ಆ) ಯಾವುದೇ ರೀತಿಯ ಅವ್ಯವಹಾರಗಳು ನಡೆದಿರುವುದು ಗಮನಕ್ಕೆ ಬಂದಿರುವುದಿಲ್ಲ

ಇ) ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯು ತೃಪ್ತಿಕರವಾಗಿದೆ ಎಂದು ವಂದಿಸಿದ್ದಾರೆ.

ಈ) ಪ್ರಸಕ್ತ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ಶಾಲೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಕಾರ್ಯನಿರ್ವಾಹಕ ನಿರ್ದೇಶಕರು ದಿ : 5–11–2004ರಂದು ನಿರ್ದೇಶನ ನೀಡಿರುತ್ತಾರೆ.

ಉ) ಜಿಲ್ಲೆಯಲ್ಲಿ ಒಟ್ಟು 12 ಪರಿಶಿಷ್ಟ ವರ್ಗದ ಆಶ್ರಮಶಾಲೆಗಳು ಇರುತ್ತವೆ. ಹೊಸದಾಗಿ ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಳುಗೋಡು ಗಿರಿಜನ ಬಾಲಕರ ವಸತಿ ಶಾಲೆಗೋಸ್ಕರ ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ, ಹಲವಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಇದರಲ್ಲಿ ಕೇಂದ್ರ ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ. ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ ಎಷ್ಟು ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದೆ? ಇದರಲ್ಲಿ ಎಷ್ಟು ಹಣ ಖರ್ಚಾಗಿದೆ, ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಇನ್ನು ಯಾವ್ಯಾವ ಕಾಮಗಾರಿಗಳು ಈ ವಸತಿ ಶಾಲೆಯಲ್ಲಿ ಆಗಬೇಕಾಗಿದೆ? ಅವು ಯಾವ್ಯಾವು ? ಈ ಕಾಮಗಾರಿಗಳಿಗೆ, ಎಷ್ಟು ಹಣ ವೆಚ್ಚವಾಗಬೇಕಾಗಿದೆ ? ಮತ್ತೆ ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ?

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. ಈಗ ಇವರ ಉಪ ಪ್ರಶ್ನೆಗಳಿಗೆ ಸಧ್ಯದಲ್ಲಿ ನಮ್ಮಲ್ಲಿ ಮಾಹಿತಿಗಳು ಇಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆಗಳ ಮೂಲಕ ಕೇಳಿದರೆ, ನಾನು ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜುರವರೆ, ಮಾನ್ಯ ಮಂತ್ರಿಗಳು ಹೊಸಬರಾಗಿದ್ದಾರೆ. ನೀವು ಅವರ ಕಚೇರಿಗೆ ಹೋಗಿ, ಮಾತನಾಡಿದರೆ ನಿಮ್ಮ ಸಮಸ್ಯೆ ಬಗೆಹರಿಯುತ್ತದೆ. ಆದುದರಿಂದ ತಾವು ದಯಮಾಡಿ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪುತ್ತೇನೆ. ಈಗ ಪ್ರಶ್ನೆಗೆ ಪೂರಕವಾದ ಪ್ರಶ್ನೆಯನ್ನು ಕೇಳುತ್ತೇನೆ, ಅದಕ್ಕೆ ಅವರು ಉತ್ತರವನ್ನು ಒದಗಿಸಲಿ. ಇಲ್ಲಿ ಕಳಪೆ ಕಾಮಗಾರಿಯಾಗಿಲ್ಲವೆಂದು ಹೇಳಿದ್ದೀರಿ ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯು ತೃಪ್ತಿಕರವಾಗಿದೆಯೆಂದು ವರದಿ ನೀಡಿದ್ದಾರೆಂದು ಹೇಳಿದ್ದೀರಿ. ಅದನ್ನು ತಾವು ಇಲ್ಲಿ ನನಗೆ ಒದಗಿಸಿದ್ದೀರಿ. ಅಲ್ಲಿ ಖಂಡಿತವಾಗಿಯೂ ಕಳಪೆ ಕಾಮಗಾರಿಯಾಗಿದೆ. ಈಗ ತಾವು ಅಲ್ಲಿಗೆ ಭೇಟಿ ನೀಡಿದರೆ, ಇಲ್ಲಿ ಉತ್ತರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಏನು ಸತ್ಯಾಂಶವೆಂದು ಕೊಟ್ಟಿದ್ದಾರೋ, ಅವರು ಮನೆಗೆ ಹೋಗಬೇಕಾಗುತ್ತದೆ. ನಾನು ಅದನ್ನೇ ನಿದರ್ಶನದ ಸಮೇತ, ಆ ಕಟ್ಟಡ ಹೇಗಿದೆಯೆಂಬುದನ್ನು ಆ ಕಟ್ಟಡ ಹೇಗಿದೆಯೆಂಬುದನ್ನು ತಮಗೆ ತೋರಿಸುತ್ತೇನೆ. ಈಗಾಗಲೇ ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯೂ ತೃಪ್ತಿಕರವಾಗಿದೆಯೆಂದು ವರದಿಯನ್ನು ಸಲ್ಲಿಸಿದ್ದಾರಲ್ಲಾ, ಅದನ್ನು ತಾವೇ ಪರಿಶೀಲನೆ ಮಾಡಿ, ಈಗ ಅವರು ದಿನಾಂಕ : 5–10–2004ರಂದು ವಸತಿ ಶಾಲೆಯನ್ನು ವರ್ಗಾವಣೆ ಮಾಡಲು ಆದೇಶವನ್ನು ಕೊಟ್ಟಿದ್ದಾರೆ. ಅದನ್ನು ತಡೆಹಿಡಿಯಿರಿ. ತಾವು ಮತ್ತು ನಾವು ಒಂದು ಸಾರಿ ಹೋಗಿ ತಪಾಸಣೆ ಮಾಡಿದ ಮೇಲೆ ಅದು ಸರಿಯಾಗಿದೆ, ಕಳಪೆ ಕಾಮಗಾರಿಯಾಗಿಲ್ಲವೆಂದರೆ ಮಾತ್ರ, ಆ ಶಾಲೆಯ ವರ್ಗಾವಣೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸದನದ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಪ್ರತಿಷ್ಟಿತವಾದಂತಹ ವಸತಿ ಶಾಲೆ ಇದು ಆಗಿದೆ. ರಾಜ್ಯದಲ್ಲಿ ಎರಡೇ ಎರಡು ವಸತಿ ಶಾಲೆಗಳು ಇದೆ, ಈ ಒಂದು ವಸತಿ ಶಾಲೆಗೆ ತಾವು ಆದ್ಯತೆಯನ್ನು ಕೊಡಬೇಕು. ಇದು ಗಿರಿ ಜನರಿಗೋಸ್ಕರ ಆಗಿರುವಂಥಾದ್ದು. ತಾವು ಇದಕ್ಕೆ ಅದ್ಯತೆಯನ್ನು ಕೊಡಬೇಕೆಂಬ ದೃಷ್ಟಿಯಿಂದ, ಇದನ್ನು ತಾವು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಕೋರುತ್ತಿದ್ದೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ದಿನಾಂಕ : 25–11–2004ರಂದು ಅಧ್ಯಕ್ಷರನ್ನು, ಆ ಅಧಿಕಾರವನ್ನು, ಕಂಟ್ರಾಕ್ಟರ್‌ದಾರರನ್ನು ಕರೆಸಿ, ಒಂದು ಸಭೆಯನ್ನು ನಡೆಸಿದೆ. ಆ ಸಭೆಯಲ್ಲಿ ಮಾನ್ಯ ಶಾಸಕರು, 13 ಪಾಯಿಂಟ್ಸ್‌ಗಳನ್ನು ಹೇಳಿದ್ದಾರೆ. ಆದಷ್ಟು ಅವುಗಳ ಬಗ್ಗೆ ಗಮನಹರಿಸಿದ್ದೇವೆ. ಪುನಃ ಅದನ್ನು ನೋಡಬೇಕು. At present, I feel. it is fit for occupation. ಇನ್ನೂ ಅದರ ಬಗ್ಗೆ ನಿಮಗೆ ಅನುಮಾನವಿದ್ದರೆ, ಸ್ವತಃ ನಾನು ಅಧಿಕಾರಿಗಳ ಜೊತೆಗೆ ಬಂದು ನೋಡಿ, ಅದು ಸರಿಯಾಗಿ ಇದ್ದರೆ, ಅದನ್ನು ವರ್ಗಾವಣೆ ಮಾಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೆ ಸದನದಲ್ಲಿ ಇರುವುದರಿಂದ ನಾನು ಹೇಳುತ್ತಿದ್ದೇನೆ. ನಮ್ಮ ಶಿಕಾರಿಪುರದಲ್ಲಿ ಈಸೂರು ಒಂದು ಐತಿಹಾಸಿಕ ಸ್ಥಳವಾಗಿದೆ. ನಾನು ಒಂದು ವಾರದ ಹಿಂದ ಇನ್‌ಸ್ಪೆಕ್ಷನ್‌ಗೆ ಹೋಗಿದ್ದೆ. ಅಲ್ಲಿ ಎಸ್.ಸಿ. ಹೆಣ್ಣುಮಕ್ಕಳ ಹಾಸ್ಟೆಲ್ ಇದೆ. ಇದು 7–8 ವರ್ಷಗಳಾಗಿದೆ. ಇದಕ್ಕೆ 10–12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಆ ಹಾಸ್ಟೆಲ್ ಒಳಗಡೆ ಒಬ್ಬರೂ ಹೋಗಿಲ್ಲ. ಅದು ಸೋರುತ್ತಿದೆ. ಹೇಳುವವರು ಕೇಳುವವರು ಯಾರೂ ಇಲ್ಲ. ಅಲ್ಲಿನ ಅಧಿಕಾರಿಗಳ ಜೊತೆಯಲ್ಲೂ ಮಾತನಾಡಿದೆ. ನಾನು ಇದು ಸಂದರ್ಭವಲ್ಲದಿದ್ದರೂ ತಮ್ಮ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಅದನ್ನು ಸರಿಪಡಿಸಿ. ಇದು 8 ವರ್ಷಗಳಾಗಿದೆ, ಎಸ್.ಸಿ. ಹೆಣ್ಣುಮಕ್ಕಳ ಹಾಸ್ಟೆಲ್, ದುಡ್ಡು ಖರ್ಚು ಆಗಿದೆ. ಬಾಗಿಲು ತೆಗೆದಿಲ್ಲ, ಸೋರುತ್ತಿದೆ. ಹೇಳುವವರು, ಕೇಳುವವರು ಯಾರು ಇಲ್ಲ. ಇದುವರೆಗೂ ಒಬ್ಬರೂ ಅದನ್ನು ಉಪಯೋಗ ಮಾಡಿಲ್ಲ. ತಾವು ಇದನ್ನು ದಯವಿಟ್ಟು ನೋಡಬೇಕೆಂದು ಹೇಳುತ್ತೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಕೂಡಲೇ ಚರ್ಚೆ ಮಾಡಿ, ಅದರ ಬಗ್ಗೆ ಗಮನಹರಿಸುತ್ತೇನೆ.

ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣದ ಬಗ್ಗೆ.

35(1137) ಶ್ರೀವಾಟಾಳ್ ನಾಗರಾಜ್ () : ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಎಷ್ಟು ಎಕರೆ ಪ್ರದೇಶ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ ;

ಆ) ಪ್ರಸ್ತುತ ವಿಮಾನ ನಿಲ್ದಾಣ ನಿರ್ಮಿಸಲು ಎಷ್ಟು ಎಕರೆ ಪ್ರದೇಶವನ್ನು ಗುರುತಿಸಲಾಗಿದೆ: ಗುರುತಿಸಿರುವ ಪ್ರದೇಶವನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿದೆಯೇ :

ಇ) ಸದರಿ ವಿಮಾನ ನಿಲ್ದಾಣ ಯೋಜನೆ ಕಾಮಗಾರಿ ಕೆಲಸಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು. ಅದರ ಅಂದಾಜು ವೆಚ್ಚವೆಷ್ಟು ಹಾಗೂ ಯೋಜನೆಯನ್ನು ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಮಿತಿ ಯಾವುದು ?

ಶ್ರೀಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಅಂದಾಜು 4100 ಎಕರೆ ಪ್ರದೇಶ ಬೇಕಾಗಬಹುದು.

ಆ) ಪ್ರಸ್ತುತ ವಿಮಾನ ನಿಲ್ದಾಣ ನಿರ್ಮಿಸಲು 4266 ಎಕರೆ 27.5 ಗುಂಟೆಗಳ ಪ್ರದೇಶವನ್ನು ಗುರುತಿಸಲಾಗಿದೆ. ಸರ್ಕಾರ ಸದರಿಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದೆ.